


### ಉತ್ತಮ ಸಲಹೆ
ವಿದ್ಯುತ್ ಉಳಿತಾಯ ಹೇಗೆ? (ಸುಧಾ, ಜುಲೈ 2) ದಿಲಾವರ್ ರಾಮದುರ್ಗ ಅವರ ಮುಖಪುಟ ಲೇಖನ ವಿದ್ಯುತ್ ಉಳಿತಾಯದ ಬಗ್ಗೆ ಉತ್ತಮ ಸಲಹೆ ನೀಡಿದೆ. ಸರ್ಕಾರ ಹಾಗೂ ಬಳಕೆದಾರರು ಇದನ್ನು ಕಾರ್ಯಗತಗೊಳಿಸಬೇಕಾಗಿದೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ, ಮುಕುಂದ ಹೆರಕಲ್ಲ, ಕಲಬುರಗಿ, ಕೋಟೇಶ್ವರ ಸೂರ್ಯ ನಾರಾಯಣರಾವ್, ಬೆಂಗಳೂರು

### ಪರಿಸರ ಕಾಳಜಿ
ಗ್ರೀನ್ ಬಿಲ್ಡಿಂಗ್ ಲೇಖನ 'ಇಂಧನ ಉಳಿಸುವ ಹೊಸ ದಾರಿ' (ಎ.ಎಂ. ಸುರೇಶ) ಪರಿಸರ ಜಾಗೃತಿ, ಮಹತ್ವದ ಜಾಗತಿಕ ಚಿತ್ರಣ ನೀಡಿತು.

–ಎಚ್.ಆನಂದಕುಮಾರ್, ಚಿತ್ರದುರ್ಗ

### ಹೂವಿನ ವೈವಿಧ್ಯ
'ಹೂವಿನೂರಿನ ದಾರಿಯಲ್ಲಿ' (ಎಚ್.ಕೆ. ಶರತ್) ಲೇಖನ ವೈವಿಧ್ಯಮಯವಾಗಿದೆ. ಚಿತ್ರಗಳು ಮುದ ನೀಡಿದವು.

–ಮಹಾದೇವಿ ಅಗಸಿಮನಿ, ಶಿವಮೊಗ್ಗ

### ವ್ಯಾಧಿಗೆ ಮದ್ದಿಲ್ಲ!
'ನಿಮ್ಮೊಡನೆ'ಯಲ್ಲಿ 'ಈ ವ್ಯಾಧಿಗೆ ಮದ್ದೆಲ್ಲಿದೆ?' (ಬಿ.ಎಂ. ಹನೀಫ್) ಬರಹ ಹೃದಯ ಕಲಕುವಂತಿದೆ. ಈ ವ್ಯಾಧಿಗೆ ಮದ್ದೇ ಇಲ್ಲ. ಸದ್ದಿಲ್ಲದೆ ಕಾಣಿಸಿಕೊಳ್ಳುವ, ಚಿಕಿತ್ಸೆಯೇ ಇಲ್ಲದ, ಅಮಾನವೀಯ, ಕ್ರೂರ ವ್ಯಾಧಿ ಇದು.

–ಡಾ.ಎಚ್. ಗಿರಿಜಮ್ಮ, ದಾವಣಗೆರೆ

### ಕನ್ನಡಿ ಹಿಡಿದಿದೆ
'ನಿಮ್ಮೊಡನೆ' ಬರಹ ನಿಜಕ್ಕೂ ಇಂದಿನ ನಮ್ಮ ಹಿರಿಯರ (ವೃದ್ಧರ) ವಾಸ್ತವ ಪರಿಸ್ಥಿತಿಗೆ ಕನ್ನಡಿ ಹಿಡಿದಿದೆ. ಸೂಕ್ತವಾದ ಅಂಕಿಅಂಶಗಳನ್ನೂ ಬರಹ ನೀಡಿದೆ.

–ಎಂ.ಜಿ. ರಾಮಚಂದ್ರ, ಮಂಡಗಳಲೆ, ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ, ಎಸ್. ಪ್ರಭಾ, ಬೆಂಗಳೂರು, ಟಿ.ಎಸ್. ಸರಸ್ವತಿ, ತುರುವೇಕೆರೆ

### ಏಕಪಕ್ಷೀಯವಾಗಿದೆ
'ಈ ವ್ಯಾಧಿಗೆ ಮದ್ದೆಲ್ಲಿದೆ?' ಬರಹ ಏಕಪಕ್ಷೀಯವಾಗಿದೆ. ಆಧುನಿಕ ಸೌಲಭ್ಯಗಳನ್ನು ವಿರೋಧಿಸುವ, ಮಕ್ಕಳ ಪರಿಸ್ಥಿತಿಗೆ ಸ್ಪಂದಿಸದ, ಸದಾ ಅತ್ತೆ, ಮಾವನ ಗತ್ತು ತೋರಿಸುವ ವೃದ್ಧರೂ ಇದ್ದಾರೆ ಎಂಬುದನ್ನು ಮರೆಯಬಾರದು.

–ಮಹಾವೀರ ಕಾಸರ, ಶಿವಮೊಗ್ಗ

### ಉತ್ತಮ ಕಥೆ
ಪ್ರೇಮಾ ಭಟ್ ಅವರ 'ಏನಾಗಬೇಕೊ ಅದೇ ಆಗೋದೇಯ' ಕಥೆ ಚೆನ್ನಾಗಿದೆ.

–ಕೊಹಿಮ, ಬಸರಕೋಡು

### ಆರೋಗ್ಯ ಲೇಖನ
'ನಪುಂಸಕತೆ ಹೆಚ್ಚುತ್ತಿದೆಯೇ?' ಉಮಾ ಅನಂತ್ ಅವರ ಆರೋಗ್ಯ ಲೇಖನ ನಪುಂಸಕತೆ ಸಮಸ್ಯೆ ಹಾಗೂ ಅದರ ನಿವಾರಣೆ ಬಗ್ಗೆ ಸೂಕ್ತ ಮಾಹಿತಿ ನೀಡಿದೆ.

–ಸುಂದರ್, ಬೆಂಗಳೂರು, ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

### ಪ್ರವಾಸಿಗರಿಗೆ ಎಚ್ಚರಿಕೆ
'ಕಾಸರಕೋಡದ ಇಕೋ ಬೀಚ್', ಕೃಷ್ಣಿ ಶಿರೂರ ಅವರ ಪ್ರವಾಸ ಲೇಖನ ಚೆನ್ನಾಗಿದೆ. ಆದರೆ ಅಲ್ಲಿಗೆ ಪ್ರವಾಸ ಹೋಗುವವರಿಗೆ ಒಂದು ಎಚ್ಚರಿಕೆ. ಈ ಬೀಚ್‌ನ ಆಸುಪಾಸಿನಲ್ಲಿ ಅನೇಕ ಹಾವು, ಹಾವಿನ ಮರಿಗಳಿವೆ. ಪ್ರವಾಸಿಗರು ಎಚ್ಚರದಿಂದ ಇರುವುದು ಲೇಸು.

–ನಾರಾಯಣಯಾಜಿ ಶಿರಾಲಿ

### ಪ್ರವಾಸದ ಅನುಭವ
'ಮನಾಲಿಯ ಕಣಿವೆಯಲ್ಲಿ' (ಸೀತಾ ಕೇಶವ) ಲೇಖನದಲ್ಲಿ ಲೇಖಕಿ ತಮ್ಮ ಪ್ರವಾಸದ ಅನುಭವದೊಂದಿಗೆ ಅನೇಕ ವಿವರಗಳನ್ನು ನೀಡಿರುವುದು ಬಹಳ ಚೆನ್ನಾಗಿದೆ.

–ವೃಂದಾ ಸಿ.ಎಂ. ಬೆಂಗಳೂರು

### ಶಿಕ್ಷಣ ಟಿಪ್ಸ್
'ಮಕ್ಕಳ ಶಿಕ್ಷಣದಲ್ಲಿ ನಾವು ಸಮಭಾಗಿಗಳೇ? (ಸುಮಬೀನಾ ಭಟ್) ಲೇಖನ ಪ್ರಸ್ತುತ ಸ್ಥಿತಿಗೆ ಸೂಕ್ತವಾಗಿದೆ. ಲೇಖಕಿ ಕೊಟ್ಟ ಟಿಪ್ಸ್ ಸರಳವಾಗಿದ್ದು ಎಲ್ಲರೂ ಪಾಲಿಸಬಹುದು.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ, ವೈ.ಜಿ. ನರಸಿಂಹನ್, ಶಿವಮೊಗ್ಗ

### ಸಹಾಯಧನ ಅಗತ್ಯ
'ಹಲಸಿನ ಚಾಕೊಲೇಟ್' ಕಾಮಧೇನು ಲೇಖನ (ಸಂಧ್ಯಾ ಹೆಗಡೆ ಆಲ್ಮನೆ) ಚೆನ್ನಾಗಿದೆ. ಇಂತಹ ಗ್ರಾಮೀಣ ಗೃಹೋದ್ಯಮಿಗಳಿಗೆ ಸರ್ಕಾರ ಸಹಾಯಧನ ನೀಡಬೇಕು.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ, ರವೀಂದ್ರನಾಥ ಶಿ.ಯಡಹಳ್ಳಿ

### ಮುದ್ದಣ ಕಾವ್ಯ ಪ್ರಶಸ್ತಿ
ಉಡುಪಿ ಜಿಲ್ಲೆಯಲ್ಲಿರುವ ಕಾಂತಾವರ ಕನ್ನಡ ಸಂಘ 2015ರ ಸಾಲಿನ ಕಾವ್ಯ ಪ್ರಶಸ್ತಿಗಾಗಿ ಕವನ ಸಂಗ್ರಹದ ಹಸ್ತಪ್ರತಿಯನ್ನು ಆಹ್ವಾನಿಸಿದೆ. ಆಸಕ್ತರು ಸ್ವವಿಳಾಸ ಹಚ್ಚಿದ ಕವರ್ ಕಳುಹಿಸಿ ಸ್ಪರ್ಧೆಯ ವಿವರ ಪಡೆಯಬಹುದು. ವಿವರ ಪಡೆಯಲು ಕೊನೆಯ ದಿನ ಜುಲೈ 30. ಹಸ್ತಪ್ರತಿ ಕಳಿಸಲು ಕೊನೆಯ ದಿನ ಆಗಸ್ಟ್ 30. ವಿಳಾಸ: ಅಧ್ಯಕ್ಷರು, ಕಾಂತಾವರ ಕನ್ನಡ ಸಂಘ, ಅಂಚೆ–ಕಾಂತಾವರ, ಉಡುಪಿ ಜಿಲ್ಲೆ. 574129
ಫೋನ್: 9900701666/ 9008978366




ಶ್ರೀ ಪಂಚಮುಖಿ ಜ್ಯೋತಿಷ್ಯಂ
INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450